303 (647) : ಶ್ರೀ ಗಂಗಾಧರ್ ನಾಗೇಶ್ (ಕಾರವಾರ) ಮಾನ್ಯ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈವರೆಗೂ ಪ್ರವಾಸೋದ್ಯಮ ಇಲಾಖೆಯು ಸಹಾಯಧನ ನೀಡಿರುವ ವಸತಿ ಗೃಹಗಳು ಯಾವುವು;

ಆ) ಸಹಾಯಧನ ನೀಡಲು ವಿಳಂಬವಾಗುತ್ತಿರುವುದು ಹಾಗೂ ಅದರಲ್ಲಿ ಅವ್ಯವಹಾರ ಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಈವರೆವಿಗೆ ಈ ಕೆಳಕಂಡ ಹೋಟೆಲ್ ಯೋಜನೆಗಳಿಗೆ ಪ್ರವಾಸೋದ್ಯಮ ಇಲಾಖೆಯು ಸಹಾಯಧನ ನೀಡಿರುತ್ತದೆ.

1. ಮೆ: ಹೋಟೆಲ್ ಗ್ರೀನ್, ಗೋಕರ್ಣ
2. ಮೆ: ಆರ್.ಎನ್.ಎಸ್. ಶೆಟ್ಟಿ ಟ್ರಸ್ಟ್, ಮುರುಡೇಶ್ವರ
3. ಮೆ: ಜಂಗಲ್ ಕ್ಯಾಂಪ್, ಅನ್‌ಮೋಡ್
4. ಮೆ: ಪ್ರಭು ಗ್ರೂಪ್ ಆಫ್ ಹೋಟೆಲ್, ಹೊನ್ನಾವರ
5. ಮೆ: ದ್ವಾರಕ, ಕಾರವಾರ
6. ಮೆ: ಹೋಟೆಲ್ ಪಾಂಡುರಂಗ ಇಂಟರ್ ನ್ಯಾಷನಲ್, ಕುಮಟಾ.
7. ಮೆ: ಸಿದ್ಧಾರ್ಥ ಡಿಲಕ್ಸ್, ಹೊನ್ನಾವರ.
8. ಮೆ: ಕೆಂಗಲ್ ಪರಮೇಶ್ವರ, ಗೋಕರ್ಣ.
9. ಮೆ: ಹೋಟೆಲ್ ಗುಡ್ ಲಕ್, ಹೊನ್ನಾವರ
10. ಮೆ: ಹೋಟೆಲ್ ವರದರಾಜ್, ಅಂಕೋಲ, ಸಿರಸಿ.

ಆ) ಆಯವ್ಯಯದಲ್ಲಿ ಕಲ್ಪಿಸಲಾದ ಅನುದಾನಕ್ಕನುಗುಣವಾಗಿ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಯಾವುದೇ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

...

307 (415) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಮಂದಿ ಗ್ರಾಮೀಣ ಕೃಪಾಂಕದಡಿಯಲ್ಲಿ ಮರು ನೇಮಕಕ್ಕೆ ಬಾಕಿ ಇರುವರು; (ಇಲಾಖಾವಾರು ವಿವರ ಒದಗಿಸುವುದು);

ಆ) ಅವರುಗಳು ಮರು ನೇಮಕವಾಗದೇ ಇರಲು ಕಾರಣವೇನು;

ಇ) ಗ್ರಾಮೀಣ ಕೃಪಾಂಕ ನೌಕರರ ಮರು ನೇಮಕಕ್ಕೆ ರಾಜ್ಯ ಸರ್ಕಾರ ರೂಪಿಸಿದ ವಿಶೇಷ ನಿಯಮಾವಳಿಯು ಸರ್ವೋಚ್ಚ ನ್ಯಾಯಾಲಯದಿಂದ ರದ್ದಾಗುವ ಸಂಭವದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರದ ಮುಂದಿನ ಕ್ರಮವೇನು ಹಾಗೂ ಈಗಾಗಲೇ ಮರು ನೇಮಕಾತಿಯಲ್ಲಿರುವ ನೌಕರರ ಹಿತರಕ್ಷಣೆಗೆ ಸರ್ಕಾರ ಬದ್ಧವೇ;

ಉ) ಮರುನೇಮಕವಾಗದೇ ಇರುವ ನೌಕರರನ್ನು ಯಾವಾಗ ನೇಮಕ ಮಾಡಿ ಕೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿ)

ಅ) ಕರ್ನಾಟಕ ಸಿವಿಲ್ ಸೇವೆಗಳು (ಗ್ರಾಮೀಣ ಕೃಪಾಂಕದ ಸೌಲಭ್ಯದ ಮೇಲೆ ನೇಮಕಾತಿಯಾದವರ ವಿಲೀನತೆ) (ವಿಶೇಷ) ನಿಯಮಗಳು, 2003ರನ್ವಯ ಮರು ನೇಮಕಕ್ಕೆ ಬಾಕಿ ಇರುವವರ ಸಂಖ್ಯೆ ಸುಮಾರು 600.

ಆ) ಸರ್ವೋಚ್ಚ ನ್ಯಾಯಾಲಯದ ದಿನಾಂಕ: 12–12–2003ರ ಮಧ್ಯಂತರ ಆದೇಶದಲ್ಲಿ ಮೇಲ್ಕಂಡ ನಿಯಮಗಳಿಗೆ ತಡೆಯಾಜ್ಞೆ ನೀಡಿರುವುದರಿಂದ ಇವರುಗಳನ್ನು ಮರು ನೇಮಕಾತಿ ಮಾಡಲು ಸಾಧ್ಯವಾಗಿರುವುದಿಲ್ಲ.

ಇ) – ಇಲ್ಲ –

ಈ) – ಉದ್ಭವಿಸುವುದಿಲ್ಲ –

ಉ) ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡುವ ತೀರ್ಪನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

...

308 (417) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಗೆ ಸೇರಿದ ರಿಸರ್ವ್ ಫಾರೆಸ್ಟ್ ಪ್ರದೇಶದಲ್ಲಿ ಎಷ್ಟು ಭೂರಹಿತ ನಿವೇಶನದಾರರು ಅರಣ್ಯ ಭೂಮಿಯನ್ನು ಆಶ್ರಯಿಸಿ ಕೊಂಡಿದ್ದಾರೆ; (ವಿಧಾನಸಭಾವಾರು ವಿವರ ಕೊಡುವುದು)

ಆ) ರಿಸರ್ವ್ ಫಾರೆಸ್ಟ್ ಆಕ್ರಮಿಸಿಕೊಂಡ ಜಮೀನನ್ನು ಭೂರಹಿತರಿಗೆ ಅದನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರಕ್ಕೆ ರಿಸರ್ವ್ ಫಾರೆಸ್ಟ್ ಜಮೀನಿನ ನಿಯಮ ಸಡಿಲಿಸಲು ಪ್ರಸ್ತಾವನೆ ಸಲ್ಲಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕುಂದಾಪುರ ತಾಲ್ಲೂಕಿನ ಅರಣ್ಯ ಇಲಾಖಾ ರಿಸರ್ವ್ ಫಾರೆಸ್ಟ್ ಪ್ರದೇಶದಲ್ಲಿ ಅತಿಕ್ರಮಣ ನಡೆಸಿರುವವರ ವಿವರ ಈ ಕೆಳಗಿನಂತಿದೆ:–

	ಅತಿಕ್ರಮಣದಾರರ ಸಂಖ್ಯೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ
ಬೈಂದೂರು ವಿಧಾನ ಸಭಾ ವ್ಯಾಪ್ತಿ	7	6,398
ಕುಂದಾಪುರ ವಿಧಾನ ಸಭಾ ವ್ಯಾಪ್ತಿ	310	172.227